# ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ. ರವರ ನ್ಯಾಯಾಲಯ, ಬೇಲೂರು.

**ಸಿ. ಸಿ. ನಂ.ಃ 874/2016**

| | | |
|---|---|---|
| ಹೆಸರು | ರಾಜು | ದಿಃ 17-11-2022 |
| ತಂದೆ ಹೆಸರು | ರಂಗಸ್ವಾಮಿ | |
| ವಯಸ್ಸು | 30 ವರ್ಷ | ಪಿಡಬ್ಲ್ಯೂಃ 2 |
| ಉದ್ಯೋಗ | ಕ್ಯಾಶೀಯರ್ | ಸಿಡಬ್ಲ್ಯೂಃ 1 |
| ವಾಸ | ಹೊಳೆಬೀದಿ, ಬೇಲೂರು | ವಿಧಿ ಬದ್ದವಾಗಿ ಪ್ರಮಾಣೀಕರಿಸಲಾಯ್ತು |

**ಮುಖ್ಯ ವಿಚಾರಣೆಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ನನಗೆ ಆರೋಪಿ ಯಾರು ಎಂದು ಗೊತ್ತಿರುವುದಿಲ್ಲ. ಚಾಸಾ-2 ನನಗೆ ಪರಿಚಯ ಇರುವುದಿಲ್ಲ.

ಈಗ ತೋರಿಸಿರುವ ದಾಖಲೆಯಲ್ಲಿರುವ ಸಹಿ ನನ್ನದು. ಸದರಿ ದಾಖಲೆ ಕೃತ್ಯ ಸ್ಥಳ ಮತ್ತು ಅಮಾನತ್ತು ಮಹಜರ್ ಆಗಿದ್ದು ಅದನ್ನು ಈಗಾಗಲೇ ನಿಪಿ-1 ಎಂದು ಗುರುತಿಸಿದ್ದು ಸಾಕ್ಷಿ ಸಹಿಯನ್ನು ನಿಪಿ-1(ಬಿ) ಎಂದು ಗುರ್ತಿಸಲಾಯಿತು.

ಈಗ ಸಾಕ್ಷಿಗೆ ಮತ್ತೊಂದು ದಾಖಲೆಯನ್ನು ತೋರಿಸಿದ್ದು ಸದರಿ ದಾಖಲೆ ಮಾದರಿ ಸೀಲಿನ ನಕಲು ಆಗಿದ್ದು ಅದನ್ನು ಈಗಾಗಲೇ ನಿಪಿ-2 ಎಂದು ಗುರುತಿಸಿದ್ದು ಸಾಕ್ಷಿ ಸಹಿಯನ್ನು ನಿಪಿ-2(ಬಿ) ಎಂದು ಗುರ್ತಿಸಲಾಯಿತು.

ನಿಪಿ-1 ಮತ್ತು 2 ರಲ್ಲಿರುವ ಸಹಿಗಳನ್ನು ಎಲ್ಲಿ ಮತ್ತು ಯಾವಾಗ ಮಾಡಿರುತ್ತೇನೆ ಎಂದು ನನಗೆ ಗೊತ್ತಿಲ್ಲ.

ನಿಪಿ-1 ಮತ್ತು 2 ರಲ್ಲಿರುವ ವಿಚಾರಗಳು ನನಗೆ ಗೊತ್ತಿಲ್ಲ. ನನ್ನ ಸಮಕ್ಷಮ ಯಾವುದೇ ಮಹಜರ್ ಮಾಡಿರುವುದಿಲ್ಲ. ಯಾವುದೇ ವಸ್ತುಗಳನ್ನು ಅಮಾನತ್ತು ಪಡಿಸಿಕೊಂಡಿರುವುದಿಲ್ಲ. ಈಗ ತೋರಿಸಿದ ಮೂರು ಪ್ಲಾಸ್ಟಿಕ್ ಬಾಟಲ್ ಗಳನ್ನು ನೋಡಿ ಗುರ್ತಿಸಿರುವುದಿಲ್ಲ. ಈ ಬಗ್ಗೆ ನಾನು ಪೋಲೀಸರ ಮುಂದೆ ಯಾವುದೇ ಹೇಳಿಕೆ ನೀಡಿರುವುದಿಲ್ಲ.

(ಸಾಕ್ಷಿಯನ್ನು ಪ್ರತಿಕೂಲ ಸಾಕ್ಷಿಯಾಗಿ ಪರಿಗಣಿಸಿ ಪಾಟೀ ಸವಾಲು ಮಾಡಲು ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರು ಅನುಮತಿ ಕೋರಿದ್ದು ಸಕಾರಣಗಳನ್ನು ಮನಗಂಡು ಅನುಮತಿ ನೀಡಲಾಯಿತು.)

**ಪಾಟೀ ಸವಾಲುಃ ಮಾನ್ಯ ಸಹಾಯಕ ಸರ್ಕಾರಿ ಅಭಿಯೋಜಕರಿಂದಃ**

ದಿಃ 11-09-2015 ರಂದು ಮಧ್ಯಾಹ್ನ 12ः40 ಗಂಟೆ ಸಮಯದಲ್ಲಿ ಬೇಲೂರು ಟೌನ್ ಅಂಬೇಡ್ಕರ್ ವೃತ್ತದ ಬಳಿ ಬಸ್ ಗಾಗಿ ಕಾಯುತ್ತಿದ್ದಾಗ ಅಬಕಾರಿ ನಿರೀಕ್ಷಕರು ಸಿಬ್ಬಂದಿಯೊಂದಿಗೆಬಂದಿದ್ದು ನನ್ನನ್ನು ಮತ್ತು ಚಾಸಾ-2 ರವರನ್ನು ಕರೆದು ಬಂದ ಮಾಹಿತಿಯನ್ನು ತಿಳಿಸಿ, ಬೇಲೂರು ತಾ. ಕಸಬಾ ಹೋಬಳಿ ಅಗಸರಹಳ್ಳಿ ಗ್ರಾಮದಲ್ಲಿ ಆರೋಪಿ ಅಕ್ರಮವಾಗಿ ಕಳ್ಳಭಟ್ಟಿ ಸಾರಾಯಿ ತಯಾರಿಸಿ ಮಾರಾಟ ಮಾಡುತ್ತಿರುವ ಬಗ್ಗೆ ಮಾಹಿತಿ ಬಂದಿದ್ದು ದಾಳಿ ಸಮಯದಲ್ಲಿ ಪಂಚರಾಗಿ ಸಹಕರಿಸುವಂತೆ ಕೋರಿದ್ದು ಅದಕ್ಕೆ ನಾವು ಒಪ್ಪಿ ಅಬಕಾರಿ ನಿರೀಕ್ಷಕರೊಂದಿಗೆ ಅಗಸರಹಳ್ಳಿ ಗ್ರಾಮಕ್ಕೆ ಹೋದೆವು ಎಂದರೆ ಸರಿಯಲ್ಲ. ಅಗಸರಹಳ್ಳಿ ಗ್ರಾಮಕ್ಕೆ ಹೋಗಿ ಆರೋಪಿ ಮನೆ ಹತ್ತಿರ ಹೋಗಿ ನೋಡಲಾಗಿ ಮನೆಯ ಬಾಗಿಲು ಬೀಗ ಹಾಕಿದ್ದು ಅಕ್ಕಪಕ್ಕದವರನ್ನು ವಿಚಾರಿಸಿದಾಗ ಆರೋಪಿಯ ಬಗ್ಗೆ ತಿಳಿಸಿದ್ದು ಆರೋಪಿಯ ಮನೆಯ ಹಿಂಭಾಗದಲ್ಲಿ ಟ್ರಾಕ್ಟರ್ ಶೆಡ್ ಪಕ್ಕದಲ್ಲಿರುವ ದನದ ಕೊಟ್ಟಿಗೆಯಲ್ಲಿ ಬೆಲ್ಲದ ಕೊಳೆ ವಾಸನೆ ಬಂದಿದ್ದು ಸ್ಥಳದಲ್ಲಿ ಶೋಧನಾ ಸಮುಚಿತ ಆಧಾರವನ್ನು ತಯಾರಿಸಿ ದನದ ಕೊಟ್ಟಿಗೆಯನ್ನು ಶೋಧಿಸಿದಾಗ ಕೊಟ್ಟಿಗೆಯ ಎಡಭಾಗದಲ್ಲಿ ಒಂದು 10 ಲೀ ಸಾಮರ್ಥ್ಯದ ಪ್ಲಾಸ್ಟಿಕ್ ಕ್ಯಾನ್ ಎರಡು ಪ್ಲಾಸ್ಟಿಕ್ ಕೊಡಗಳಲ್ಲಿ ತಲಾ 15 ಲೀ ನಂತೆ ನೊರೆಯಿಂದ ಕೂಡಿದ ಒಟ್ಟು 30 ಲೀ ನಷ್ಟು ಬೆಲ್ಲದ ಕೊಳೆ ಇತ್ತು, ಹಾಗೂ ಕಳ್ಳಭಟ್ಟಿ ತಯಾರಿಕೆಗೆ ಬಳಸುವ ಅಲ್ಯುಮಿನಿಯಂ ಕಡುಬಿನ ಪಾತ್ರೆ ಇರುವುದು ಕಂಡುಬಂತು ಎಂದರೆ ಸರಿಯಲ್ಲ. ಆರೋಪಿಯ ಬಗ್ಗೆ ಕೇಳಲಾಗಿ ಆರೋಪಿ ತಲೆ ಮರೆಸಿಕೊಂಡಿದ್ದು ಕಂಡುಬಂತು ಎಂದರೆ ಸರಿಯಲ್ಲ. ದೊರೆತ 10 ಲೀ ನ ಪ್ಲಾಸ್ಟಿಕ್ ಕ್ಯಾನ್ ನ್ನು ಪರಿಶೀಲಿಸಲಾಗಿ ಅದರಲ್ಲಿ 3 ಲೀ ನಷ್ಟು ಕಳ್ಳಭಟ್ಟಿ ಸಾರಾಯಿ ಇದ್ದು ಕಂಡುಬಂದಿದ್ದು ಅದರಿಂದ 500 ಎಂ ಎಲ್ ನಷ್ಟು ಕಳ್ಳಭಟ್ಟಿ ಸಾರಾಯಿಯನ್ನು ಹಾಗೂ 2 ಪ್ಲಾಸ್ಟಿಕ್ ಕೊಡಗಳಲ್ಲಿ ತಲಾ 15 ಲೀ ನಂತೆ ಒಟ್ಟು 30 ಲೀ ಬೆಲ್ಲದ ಕೊಳೆಯಿಂದ 500 ಎಂ ಎಲ್ ನ ಎರಡು ಪ್ಲಾಸ್ಟಿಕ್ ಬಾಟಲಿಗಳನ್ನು ರಾಸಾಯನಿಕ ಪರಿಕ್ಷೆಗಾಗಿ ಮಾದರಿ ತೆಗೆದು ಬಟ್ಟೆಯಿಂದ ಸುತ್ತಿ ದಾರದಿಂದ ಕಟ್ಟಿ ನಮ್ಮ ಸಹಿ ಇರುವ ಚೀಟಿಯನ್ನು ಅಂಟಿಸಿ ಇಲಾಖಾ ಸೀಲು ಹಾಕಲಾಯಿತು ಎಂದರೆ ಸರಿಯಲ್ಲ. ಚಿಕ್ಕ ಚೀಟಿಗಳಿಗೆ ವಿವರ ಬರೆದು ನಮ್ಮ ಸಹಿ ಪಡೆದರು ಎಂದರೆ ಸರಿಯಲ್ಲ. ಮಾದರಿ ಸೀಲಿನ ನಕಲನ್ನು ತಯಾರಿಸಿ ಅದಕ್ಕೂ ನಮ್ಮ ಸಹಿ ಪಡೆದರು

ಎಂದರೆ ಸರಿಯಲ್ಲ. ನಂತರ ದೊರೆತ ಎಲ್ಲಾ ಸ್ವತ್ತುಗಳನ್ನು ನನ್ನ ಹಾಗೂ ಚಾಸಾ-2 ರವರ ಸಮಕ್ಷಮ ನಿಪಿ-1 ರಂತೆ ಮಧ್ಯಾಹ್ನ 12:40 ರಿಂದ 1:45 ವರೆಗೆ ಮಹಜರ್ ಮೂಲಕ ಅಮಾನತ್ತುಪಡಿಸಿಕೊಂಡರು ಎಂದರೆ ಸರಿಯಲ್ಲ. ನಿಪಿ-1 ಮತ್ತು 2 ಕ್ಕೆ ನಾನು ಓದಿ ನೋಡಿ ಸ್ಥಳದಲ್ಲೇ ಸಹಿ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಈಗ ಓದಿ ಹೇಳಿದಂತೆ ನಾನು ಪೊಲೀಸರ ಮುಂದೆ ಹೇಳಿಕೆ ನೀಡಿರುತ್ತೇನೆ ಎಂದರೆ ಸರಿಯಲ್ಲ. ಸದರಿ ಹೇಳಿಕೆಯನ್ನು ಸಾಕ್ಷಿ ನೋಡಿ ನಿರಾಕರಿಸಿದ್ದು ಹೇಳಿಕೆಯನ್ನು ನಿಪಿ-4 ಎಂದು ನಿಶಾನೆಗೊಳಪಡಿಸಲಾಯಿತು. ನಿಪಿ-1, 2 ಮತ್ತು 4 ರ ವಿಚಾರಗಳು ಗೊತ್ತಿದ್ದರೂ ಸಹ ಆರೋಪಿಗೆ ಸಹಾಯ ಮಾಡಲು ಸುಳ್ಳು ಸಾಕ್ಷಿ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ.

ಪಾಟೀ ಸವಾಲುಃ ಶ್ರೀ ಸಿ ಎಂ ಪಿ ರವರಿಂದಃ

ಆರೋಪಿ ಪರ ವಕೀಲರು ಯಾವುದೇ ಪಾಟೀ ಸವಾಲು ಇಲ್ಲ ಎಂದು ನುಡಿಯುತ್ತಾರೆ.

**(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದಂತೆ ಬೆರಳಚ್ಚು ಮಾಡಲಾಯಿತು)**

ಓ. ಹೇ. ಕೇ. ಸರಿ. ಇದೆ

(ಪ್ರಸನ್ನಕುಮಾರ್ ಸಿ.)
ಸಿವಿಲ್ ಜಡ್ಜ್ ಮತ್ತು ಜೆ.ಎಂ.ಎಫ್.ಸಿ.
ಬೇಲೂರು.

Case called again.

Accused No.1 present. Accused No.2 to 6 absent.

CW-1 and 2 are present. They are examined as PW-1 and 2 respectively. Ex.P-1 to P-3, P-1(a), P-2(a) are marked.

The said material witnesses found to be turned hostile.

The Learned APP seeks to issue Summons to other witnesses. Since the material witnesses turned hostile, no purpose will be served if the summons is issued to other witnesses.

Hence, prayer of Learned APP is rejected.

The statement of accused U.s 313 of CrPC is also hereby dispensed.

A memo is filed by the Counsel for the accused No.1 to 6 stating that the earlier surety bond executed by them may be considered as bond executed towards compliance of provisions of sec. 437-A of CrPC.

Heard arguments.

For Judgment by: 27-12-2021.

**Civil Judge and JMFC, Belur.**